## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ಶಿಡ್ಲಘಟ್ಟ

ಸಿಸಿ.443/2019

| | | | |
|---|---|---|---|
| ಸಾಕ್ಷಿದಾರರ ಹೆಸರು | : | ನಿತಿನ್ ಎ | ಸಿಡಬ್ಲೂಃ **03** |
| ತಂದೆ/ಗಂಡನ ಹೆಸರು | : | ಲೇಟ್ ಆಂಜಿನಪ್ಪ | ಪಿಡಬ್ಲೂಃ **01** |
| ವಯಸ್ಸು | : | 36 ವರ್ಷ | ಪ್ರಮಾಣೀಕರಿಸಲಾದ ದಿನಾಂಕ |
| ವೃತ್ತಿ | : | ಅಬಕಾರಿ ಮುಖ್ಯ ಪೇದೆ, ಶಿಡ್ಲಘಟ್ಟ | 09.01.2025 |
| ವಾಸ ಸ್ಥಳ | : | ಶಿಡ್ಲಘಟ್ಟ | |

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.
ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದಃ

ನಾನು ದಿಃ**25.08.2014** ರಿಂದ ಇಲ್ಲಿಯವರೆಗೆ ಶಿಡ್ಲಘಟ್ಟದ ಅಬಕಾರಿ ನಿರೀಕ್ಷಕರ ಕಛೇರಿಯಲ್ಲಿ ಅಬಕಾರಿ ಮುಖ್ಯ ಪೇದೆ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿನಾಂಕಃ **16.04.2018** ರಂದು ಕರ್ನಾಟಕ ವಿಧಾನ ಸಭಾ ಚುನಾವಣೆ ಪ್ರಯುಕ್ತ ರಾ.ಸು.**07.30** ರ ಸಮಯದಲ್ಲಿ ಶಿಡ್ಲಘಟ್ಟ-ಬಾಗೇಪಲ್ಲಿ ಮುಖ್ಯ ರಸ್ತೆಯ ಸಾದಲಿ ಕ್ರಾಸ್ ಬಳಿ ಗಸ್ತು ಕರ್ತವ್ಯದಲ್ಲಿದ್ದಾಗ ರಾ.ಸು.**08** ಗಂಟೆ ಸಮಯದಲ್ಲಿ ಬಾಗೇಪಲ್ಲಿ ಕಡೆಯಿಂದ ಒಬ್ಬ ವ್ಯಕ್ತಿ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದು ನಮ್ಮ ಇಲಾಖಾ ವಾಹನವನ್ನು ನೋಡಿ ಪರಾರಿಯಾಗಲು ಪ್ರಯತ್ನಿಸಿದ್ದು ಆತನನ್ನು ಹಿಡಿಯಲು ಪ್ರಯತ್ನಿಸಿದ್ದು ಆದರೆ ಆತ ಕತ್ತಲೆಯಲ್ಲಿ ಓಡಿ ಹೋಗಿ ಪರಾರಿ ಆಗಿರುತ್ತಾರೆ. ನಂತರ ಸ್ಥಳಕ್ಕೆ ಬಂದು ದ್ವಿಚಕ್ರ ವಾಹನವನ್ನು ಪರಿಶೀಲೀಸಲಾಗಿ ಸದರಿ ವಾಹನದ ಟಿ ವಿ ಎಸ್ ಎಕ್ಸ್ ಎಲ್ ಹೆವಿ ಡ್ಯೂಟಿ ವಾಹನವಾಗಿದ್ದು ಅದರ ಸಂಃಕೆಎ-**40**-ವೈ-**1032** ಆಗಿರುತ್ತದೆ. ಸದರಿ ವಾಹನದಲ್ಲಿ ಒಂದು ಹಳದಿ ಬಣ್ಣದ ಪ್ಲಾಸ್ಟಿಕ್ ಚೀಲ ಇದ್ದು ಅದನ್ನು ಪರಿಶೀಲಿಸಲು ರಸ್ತೆಯಲ್ಲಿ ಹಾಕು ಹೋಗುತ್ತಿದ್ದ ಸಾರ್ವಜನಿಕರನ್ನು ಪಂಚರಾಗಿ ಸಹಕರಿಸಲು ಕೋರಿದ್ದು ಆದರೆ ಅವರು ನಿರಾಕರಿಸಿರುತ್ತಾರೆ. ನಂತರ ಚಾ.ಸಾ.**1** ಮತ್ತು **2** ಹಾಗೂ ನನ್ನನ್ನು ಪಂಚರನ್ನಾಗಿ ಬರ ಮಾಡಿಕೊಂಡು ಶೋದನಾ ವಾರೆಂಟನ್ನು ತಯಾರಿಸಿ, ದ್ವಿಚಕ್ರ ವಾಹನವನ್ನು ಪರಿಶೀಲೀಸಲಾಗಿ ಸದರಿ ಹಳದಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿ **90** ಎಂ ಎಲ್ ನ **40** ಒರಿಜಿನಲ್ ಛಾಯ್ಸ್ ವಿಸ್ಕಿಯ ಮದ್ಯದ ಟೆಟ್ರಾ ಪ್ಯಾಕೆಟುಗಳು ಹಾಗೂ **90** ಎಂ ಎಲ್ ನ **96** ಬೆಂಗಳೂರು ಮಾರ್ಟ್ ವಿಸ್ಕಿಯ ಮದ್ಯದ ಟೆಟ್ರಾ ಪ್ಯಾಕೆಟುಗಳು ಕಂಡು ಬಂದಿರುತ್ತವೆ. ಸದರಿ ಮದ್ಯವನ್ನು ಸಾಗಾಣಿಕೆ ಮಾಡಲು ಪರವಾನಗಿ ಇರುವುದರ ಬಗ್ಗೆ ಪರಿಶೀಲಿಸಲಾಗಿ ಆ ರೀತಿ ಯಾವುದೇ ದಾಖಲೆ ಕಂಡು ಬಂದಿರುವುದಿಲ್ಲ. ನಂತರ ದೊರೆತ ಮದ್ಯಗಳಲ್ಲಿ ತಲಾ **15** ಮದ್ಯದ ಟೆಟ್ರಾ ಪ್ಯಾಕೆಟ್

ಗಳನ್ನು ರಸಾಯನಿಕ ಪರೀಕ್ಷೆಗೆ ತೆಗೆದು ಒಂದು ಬಿಳಿ ಬಟ್ಟೆಯಲ್ಲಿ ಸುತ್ತಿ ಸೀಲನ್ನು ತಯಾರಿಸಿ ಚೀಟಿಯನ್ನು ಅಂಟಿಸಿ ಮಹಜರನ್ನು ಬರೆಯಲಾಗಿರುತ್ತದೆ. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರೀಸಲಾಗಿ ಸದರಿ ದಾಖಲೆ ಮಹಜರಾಗಿದ್ದು ಅದನ್ನು ನಿ.ಪಿ.1 ಎಂದು ಸಾಕ್ಷಿ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ನಂತರ ದಿಃ03.07.2018 ದೊರೆತ ಮಧ್ಯವನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದುಕೊಂಡು ಹೋಗಿದ್ದು ನಂತರ ದಿಃ18.08.2018 ರಂದು ರಾಸಾಯನಿಕ ವರದಿಯನ್ನು ಪಡೆದುಕೊಂಡು ಬಂದು ಚಾ.ಸಾ.6 ರವರಿಗೆ ನೀಡಿರುತ್ತೇನೆ. ಸಾಕ್ಷಿಗೆ ಈಗ ನ್ಯಾಯಾಲಯದಲ್ಲಿ ಹಾಜರು ಪಡಿಸಿದ ಖಾಲಿ ಇರುವ 180 ಎಂ ಎಲ್ ನ 16 ಒರಿಜಿನಲ್ ಛಾಯ್ಸ್ ವಿಸ್ಕಿಯ ಮಧ್ಯದ ಟೆಟ್ರಾ ಪ್ಯಾಕೆಟಗಳು ಹಾಗೂ ಖಾಲಿ ಇರುವ 90 ಎಂ ಎಲ್ ನ 12 ಬೆಂಗಳೂರು ಮಾರ್ಟ್ ಮಧ್ಯದ ಟೆಟ್ರಾ ಪ್ಯಾಕೆಟುಗಳನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಒಟ್ಟಾಗಿ ಮು.ಮಾ.1 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಕೆ ಎಂ ವಿ ವಕೀಲರಿಂದಃ-</u>

ಗಸ್ತು ಕರ್ತವ್ಯಕ್ಕೆ ನಾನು ಚಾ.ಸಾ.1, 2 ಹಾಗೂ 6 ರವರು ಹೋಗಿರುತ್ತೇವೆ. ಸಾದಲಿ ಕ್ರಾಸ್ ರಾಜ್ಯ ಹೆದ್ದಾರಿ ಎಂದರೆ ಸರಿ. ಸದರಿ ಕ್ರಾಸ್ ನಲ್ಲಿ ಹಲವಾರು ಹೋಟೆಲುಗಳು ಮತ್ತು ಅಂಗಡಿಗಳು ಇರುತ್ತವೆಂದರೆ ಸಾಕ್ಷಿ ಯಾವುದು ಇರುವುದಿಲ್ಲ ಎಂದು ಹೇಳುತ್ತಾರೆ. ಸಾದಲಿ ಕ್ರಾಸ್ ಲ್ಲಿ ನಂದಿನಿ ಹಾಲಿನ ಕೇಂದ್ರ ಇರುತ್ತದೆಂದರೆ ಸಾಕ್ಷಿ ಘಟನಾ ಸ್ಥಳದಿಂದ ದೂರು ಇರುತ್ತದೆಂದು ಹೇಳುತ್ತಾರೆ. ಘಟನಾ ಸ್ಥಳಕ್ಕೂ ಸದರಿ ಹಾಲಿನ ಕೇಂದ್ರಕ್ಕೂ ಸುಮಾರು 100 ರಿಂದ 150 ಮೀಟರ್ ದೂರ ಇರುತ್ತದೆಂದು ಹೇಳು ತ್ತಾರೆ. ಸಾಮಾನ್ಯವಾಗಿ ಸದರಿ ಹಾಲಿನ ಕೇಂದ್ರದಲ್ಲಿ ಜನರು ಕೆಲಸ ಮಾಡುತ್ತಾರೆಂದರೆ ಸಾಕ್ಷಿ ರಾತ್ರಿ 08 ಗಂಟೆ ಆದ್ದರಿಂದ ಯಾರು ಇರಲಿಲ್ಲ ಹಾಗೂ ಎರಡು ಅಂಗಡಿಗಳು ಇದ್ದು ಅವುಗಳು ಸಹ ಮುಚ್ಚಲಾಗಿತ್ತು ಎಂದು ಹೇಳುತ್ತಾರೆ. ಘಟನಾ ಸಮಯದಲ್ಲಿ ಕತ್ತಲಾಗಿ ಬೀದಿ ದೀಪಗಳು ಇತ್ತು. ಬೀದಿ ದೀಪದ ಬೆಳಕು ಇರುವುದರ ಬಗ್ಗೆ ನಿ.ಪಿ.1 ರಲ್ಲಿ ಹೇಳಿರುವುದಿಲ್ಲ. ಸಾದಲಿ ಕ್ರಾಸ್ ಬಳಿ ತೋಟಗಳು ಇರುತ್ತವೆಂದರೆ ಸರಿ. ಸಾಮಾನ್ಯವಾಗಿ ರೈತರು ಸದರಿ ತೋಟದಲ್ಲಿ ಶೆಡ್ ಗಳನ್ನು ಹಾಕಿಕೊಂಡು ಇರುತ್ತಾರೆಂದರೆ ಸಾಕ್ಷಿ ಒಂದು ದಾಳಿಂಬೆ ತೋಟದಲ್ಲಿ ಶೆಡ್ ಇದ್ದು ಅಲ್ಲಿ ಯಾರು ಇರಲಿಲ್ಲ ಎಂದು ಹೇಳುತ್ತಾರೆ. ಸದರಿ ದಾಳಿಂಬೆ ತೋಟದ ಬಗ್ಗೆ ನಿ.ಪಿ.1 ರಲ್ಲಿರುವ ಚಕ್ಕುಬಂದಿಯಲ್ಲಿ ಹೇಳಲಾಗಿರುತ್ತದೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ರೀತಿ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಯಾವುದೇ ಮಧ್ಯವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ಮು.ಮಾ.1 ಕ್ಕೂ ಆರೋಪಿಗೂ ಯಾವುದೇ ರೀತಿ ಸಂಬಂದ ಇಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ಮೇಲಾಧಿಕಾರಿ ಮಾತನ್ನು ಕೇಳಿಕೊಂಡು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಶಿಡ್ಲಘಟ್ಟ.